ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. *

12.00 ಪಿ.ಎಂ.

ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 1997

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ 1997ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಹೀಗಿದೆ:

"1997ನೇ ಸಾಲಿನ ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ 1997ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.*

ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 1997

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ 1997ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"1997ನೇ ಇಸವಿಯ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

---

* ಅನುಬಂಧ II, * ಅನುಬಂಧ III

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, 1997ನೇ ಇಸವಿಯ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ. * ಈಗ ಬೇಡಿಕೆ ಮೇಲಿನ ಚರ್ಚೆ. ಮಾನ್ಯ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭಿಸಬೇಕು.

ವಿತ್ತೀಯ ಕಾರ್ಯಕಲಾಪಗಳು

1997 - 98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇಂದು ನಮ್ಮ ಮುಂದೆ ಇರತಕ್ಕ ಅನೇಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳ ಬೇಡಿಕೆಗಳೂ ಇವೆ. ಇರಿಗೇಷನ್ ಮಂತ್ರಿಗಳ ಬೇಡಿಕೆ ಇದೆ. ಒಟ್ಟಾರೆ ಹೆಚ್ಚು ಕಡಿಮೆ ಒಂದು ಚೌಚೌ ಇದ್ದಹಾಗೆ ನಾವು ಸಾಕಷ್ಟು ಸಮಯವನ್ನು ಈ ಬಾರಿ ಸದನದಲ್ಲಿ ಈ ಸಲ ಇಟ್ಟುಕೊಂಡಿದ್ದರೂ ಕೂಡ ಕೊನೆಗೆ ಈ ಬೇಡಿಕೆಯ ಮೇಲೆ ಮಾತನಾಡುವಾಗಲೇ ಸಮಯದ ಅಭಾವವಾಗಿ ಇವತ್ತು ಅನೇಕ ಬೇಡಿಕೆಗಳನ್ನು ಒಂದುಕಡೆ ಕೂಡಿಸಿ ಮಾತನಾಡತಕ್ಕ ಪರಿಸ್ಥಿತಿ ಬಂದಿದೆ. ಪ್ರಮುಖವಾಗಿ ಮೊದಲನೆಯದಾಗಿ ನಾನು ನಮ್ಮ ನೀರಾವರಿ ಇಲಾಖೆಯ ಮೇಲೆ ಕೆಲವು ಮಾತುಗಳನ್ನು ಅಡಿ ಮುಂದೆ ಎಕ್ಸೈಜ್, ಲಾ ಅಂಡ್ ಆರ್ಡರ್ ಉಳಿದ ವಿಷಯಗಳ ಮೇಲೆ ನಾನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ ಸದನದ ಹೊರಗಡೆ ಪ್ರಸ್ತಾಪ ಮಾಡತಕ್ಕದ್ದು ಏನೆಂದರೆ ಯಾವಾಗಲೂ ವಿರೋಧಪಕ್ಷದವರು ಟೀಕೆ ಮಾಡುವಾಗ ಅವರ ಟೀಕೆಗಳು ಕನ್‌ಸ್ಟ್ರಕ್ಟೀವಾಗಿ ಇರುವುದಿಲ್ಲ, ಕೇವಲ ಮಾತಿಗಾಗಿ ಮಾತು ಎಂದು ಅಡಿ ಅದರ ಪ್ರಯೋಜನ ನಮಗೂ ಆಗುವುದಿಲ್ಲ, ರಾಜ್ಯಕ್ಕೂ ಆಗುವುದಿಲ್ಲ ಎನ್ನತಕ್ಕ ಮಾತನ್ನು ಹೊರಗಡೆ ಹೇಳಿದ್ದಾರೆ. ಕೆಲವು ಸಾರಿ ಈ ಸದನದಲ್ಲೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಈಗ ನಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇವೆ. ಅವು ಕಾನೂನು ರೀತಿಯಾಗಿ ಮತ್ತು ಕೆಲವು ಅವರು ಮಾಡಿದಂಥ ಕೆಲಸ ಕಾನೂನು ಬಾಹಿರವಾಗಿರತಕ್ಕದ್ದು ಕೂಡ ಅವರ ಗಮನಕ್ಕೆ ನಾವು ತಂದಾಗಲೂ ಕೂಡ ಅದನ್ನೇ ಸರಿ ಇದೆ, ತಪ್ಪು ಮಾಡಿದ್ದನ್ನೇ ಸರಿ ಇದೆ ಎಂದು ಹೇಳಿ ಸಮರ್ಥಿಸಿಕೊಳ್ಳತಕ್ಕ ಶಕ್ತಿ ಅವರಿಗೆ ಇದೆ. ಇದನ್ನು ಅನೇಕ ಸಾರಿ ಅವರು ಮಾಡಿದ್ದಾರೆ. ಆ ಬಗ್ಗೆ ಕೆಲವು ಉದಾಹರಣೆಗಳನ್ನು ನಾನು ಈ ಸದನದ ಮುಂದೆ ಕೊಡುತ್ತೇನೆ. ಇವತ್ತು ನೀರಾವರಿ ಬಗ್ಗೆ ನಾವು ಹೇಳಬೇಕಾದರೆ ನೀರಾವರಿ ಇಲಾಖೆ ರೈತರ ಜೀವನಕ್ಕೆ ನೇರವಾಗಿ ಸಂಬಂಧಪಟ್ಟಂಥ ಇಲಾಖೆ, ಮತ್ತು ನೀರಾವರಿಯಿಂದ ನಮ್ಮ ರಾಜ್ಯದಲ್ಲಿ ಇರತಕ್ಕ ಸುಮಾರು 67-70 ಲಕ್ಷ ಕುಟುಂಬಗಳು ಏನಿವೆ ಆ ಕುಟುಂಬಕ್ಕೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಅವರ ಜೀವನ ಮಟ್ಟವನ್ನು ಎತ್ತರಿಸತಕ್ಕದ್ದಾಗಲೀ ಅಥವಾ ಅವರಿಗೆ ಅವರ ಜೀವನವನ್ನು ನಡೆಸಿಕೊಳ್ಳತಕ್ಕ ಬೇಸಿಕ್ ರಿಸೋರ್ಸಸ್ ಎಂದರೆ ತಪ್ಪಾಗುವುದಿಲ್ಲ. ಈ ಒಂದು ನೀರಾವರಿಯಲ್ಲಿ ನಾವು ಎಷ್ಟರಮಟ್ಟಿಗೆ ಲಕ್ಷ್ಯವನ್ನುರಿಸಿದ್ದೇವೆ. ಪ್ರಶ್ನೆ ಅದಲ್ಲ. ನಾವು ಎಷ್ಟು ಹಣ ಖರ್ಚು ಮಾಡಿದ್ದೇವೆ ಎಂಬುದೂ ಪ್ರಶ್ನೆಯಲ್ಲ. ನಾವು ಎಷ್ಟರಮಟ್ಟಿಗೆ ಹಣದ ಜೊತೆಯಲ್ಲಿ ಆ ಇರಿಗೇಷನ್